ದೊರೆಯದಿರುವುದರಿಂದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ವಿತರಿಸುತ್ತಿರುವ ಪಡಿತರ ಚೀಟಿಯನ್ನು ಪಡೆಯಲು ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನವನ್ನು ನಾನು ಶೂನ್ಯವೇಳೆಯಲ್ಲಿ ಸೆಳೆಯಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಸದನದಲಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ಅವರು ವಿಧಾನ ಪರಿಷತ್‌ಗೆ ಹೋಗಿದ್ದಾರೆ.

ಅಧ್ಯಕ್ಷರು: ಅವರು ಬಂದ ಮೇಲೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು: ಮಾನ್ಯ ಹೆಚ್.ಡಿ.ರೇವಣ್ಣನವರೆ ಈ ವಿಷಯ ನಿಲುವಳಿ ಸೂಚನೆಯಲ್ಲಿ ಎಲ್ಲಿ ಬರುತ್ತದೆ.?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಈ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ನಂತರ ಏನು ಬೇಕಾದರೂ ಹೇಳಿ.

ಅಧ್ಯಕ್ಷರು: ಆಯಿತು. ಪ್ರಸ್ತಾಪ ಮಾಡಿ.

3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದ ನಿರಂತರ ವಿದ್ಯುತ್ ಯೋಜನೆಯಡಿ ಸುಮಾರು 2,600 ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆದಿರುವ ಬಗ್ಗೆ

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದ ನಿರಂತರ ವಿದ್ಯುತ್ ಯೋಜನೆಯಡಿಯಲ್ಲಿ ಸುಮಾರು 2600 ಕೋಟಿ ರೂ.ಗಳಿಗೆ ಟೆಂಡರ್ ಕರೆದು ಅಂದಾಜು ತಯಾರು ಮಾಡಿದ್ದಾರೆ.

ಅಧ್ಯಕ್ಷರು: ಎಲ್ಲವನ್ನೂ ನಿಯಮ 60 ರಲ್ಲಿ ಚರ್ಚೆಗೆ ತಂದರೆ ಈ ನಿಯಮ ಅರ್ಥವನ್ನೇ ಕಳೆದುಕೊಂಡು ಬಿಡುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ: ಒಂದು ನಿಮಿಷ ಪ್ರಸ್ತಾಪ ಮಾಡುತ್ತೇನೆ. ಇವತ್ತು ಅರ್ಧ ಗಂಟೆ, ವಿದ್ಯುತ್ ಬರುತ್ತಿಲ್ಲ. ಕೆಲವು ಕಡೆ ಒಂದು ಗಂಟೆ, ಎರಡು ಗಂಟೆಗಳ ಕಾಲ ಕರೆಂಟೆ ಬರುತ್ತಿಲ್ಲ. ತಾವು ಪ್ರಸ್ತಾಪ ಮಾಡುವುದೇ ಬೇಡವೆಂದರೆ ಹೇಗೆ? ಅವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು: ಆಯಿತು. ಪ್ರಸ್ತಾಪ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಇವತ್ತು 2,600 ಕೋಟಿ ರೂ.ಗಳಿಗೆ ಟೆಂಡರ್ ಕರೆದು ಅಂದಾಜು ತಯಾರು ಮಾಡಿದ್ದೀರಿ. ಸುಮಾರು 4,000 ಕೋಟಿ ರೂ.ಗಳಿಗೆ ಟೆಂಡರ್ ಕೊಟ್ಟಿದ್ದೀರಿ. ಎರಡು ವರ್ಷದಲ್ಲಿ ಮುಗಿಸಬೇಕಾಗಿತ್ತು. ಅದರಲ್ಲಿ 4,000 ಕೋಟಿ ರೂ.ಗಳ ಟೆಂಡರ್‌ನಲ್ಲಿ 40% aboveಕೊಟ್ಟಿದ್ದಾರೆ. ಕೊಡಲಿ ನಮ್ಮದೇನು ಅಭ್ಯಂತರವಿಲ್ಲ. ಅದೇನು ಇದೆಯೆಂದು ನೋಡೋಣ. ಇದರಲ್ಲಿ 70% ವೈರು, ಟ್ರಾನ್ಸ್‌ಫಾರ್ಮರ್, ಕಂಬ, ಪೋಲು ಇವುಗಳನ್ನೆಲ್ಲಾ ಕೊಡುವುದು ಇಲಾಖೆಯಿಂದ, ಈಗಾಗಲೇ ಒಂದೇ ಸಾರಿ ಸುಮಾರು 2,800 ಕೋಟಿ ರೂ.ಗಳ ಪದಾರ್ಥಗಳನ್ನು ಖರೀದಿ ಮಾಡಿದ್ದು, ಇವತ್ತು ಕೆಲವು ಕಡೆ ಸಾಮಗ್ರಿಗಳನ್ನು ಉಗ್ರಾಣಗಳಲ್ಲಿ stockಮಾಡುವುದಕ್ಕಾಗಿಲ್ಲ. ಆ ತರಹ ಇವತ್ತು ಎಲ್ಲೆಲ್ಲಿ ಬಿದ್ದಿದೆಯೋ ಗೊತ್ತಿಲ್ಲ. ಸಿಕ್ಕಿದೆಯೋ ಇಲ್ಲವೋ ಗೊತ್ತಿಲ್ಲ. ಆ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ.

ಅಧ್ಯಕ್ಷರು: ನಿಯಮ 60 ರಡಿಯಲ್ಲಿ ಈ ವಿಷಯ ಹೇಗೆ ಬರುತ್ತದೆಂಬ ಬಗ್ಗೆ ಹೇಳಿ. ನಿಯಮ 60 ರಲ್ಲಿ ಹೇಗೆ ಬರುತ್ತದೆ?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ,ಒಂದು ನಿಮಿಷ, ಪ್ರಸ್ತಾಪ ಮಾಡುತ್ತಿದ್ದೇನಲ್ಲ? 2,611 ಕೆ.ವಿ ಲೈನ್ ಎಳೆಯಬೇಕೆಂದು ಹೇಳಿ ಮಾಡಿದ ಯೋಜನೆಗೆ ಇವತ್ತಿನವರೆಗೆ 350 ಕೆ.ವಿ ಕೂಡ ಲೈನ್ ಎಳೆಯುವುದಕ್ಕಾಗಿಲ್ಲ. ಆ 350 ಕೆ.ವಿ ಯನ್ನು ಚಾರ್ಜ್ ಮಾಡುವುದಕ್ಕಾಗಿಲ್ಲ. ಎರಡು ವರ್ಷದಲ್ಲಿ ಮಾಡುತ್ತೇವೆಂದು ಹೇಳಿದ್ದು, ಇವತ್ತಿನವರೆಗೆ ಮಾಡಿಲ್ಲ. ಇದರಲ್ಲಿ ಸಾಕಷ್ಟು ಲೋಪದೋಷಗಳಿವೆ. ಅದರಿಂದಾಗಿ ನಾನು ಹೇಳುತ್ತಿದ್ದೇನೆ. ಒಂದು ಕಡೆ ಐದು ಕಂಪನಿಗಳು ಇವತ್ತು ನೂರಾರು ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿವೆ. ಆದುದರಿಂದ ದಯಮಾಡಿ ತಾವು ಈ ಚರ್ಚೆಗೆ ಅವಕಾಶ ಕೊಡಬೇಕು. ನಾನು ಈ ಬಗ್ಗೆ detail ಆಗಿ ಎಳೆ ಎಳೆಯಾಗಿ ಬಿಡಿಸುತ್ತೇನೆ. ನಮ್ಮ ಮಾನ್ಯ ಇಂಧನ ಇಲಾಖೆಯ ಸಚಿವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮೊನ್ನೆ ಅವರೊಂದು ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಇದು ಯಾವ ದೃಷ್ಟಿಯಿಂದಲೂ ಕೂಡ ನಿಯಮ 60 ರಡಿಯಲ್ಲಿ ಬರುವ ವಿಚಾರ ಅಲ್ಲ. ಎರಡನೆಯದಾಗಿ ಇವತ್ತು ಬಜೆಟ್‌ನ ಬೇರೆ ಬೇರೆ ಇಲಾಖೆಗಳ ಮೇಲೆ ಡಿಮ್ಯಾಂಡ್ಸ್ ಮೇಲೆ ಚರ್ಚೆಯಿದೆ. ಆ ಸಮಯದಲ್ಲಿ ಮಾನ್ಯ ಇಂಧನ ಇಲಾಖೆ ಮೇಲೆ ದಯವಿಟ್ಟು ಚರ್ಚೆ ಮಾಡಲಿ ನಿಮ್ಮ ಮುಂದೆ ಈ ರೀತಿ ಬೇರೆ ಬೇರೆ ರೀತಿಯಲ್ಲಿ ಅವಕಾಶಗಳಿರುವಾಗ ದಯವಿಟ್ಟು ಅದರಲ್ಲಿ ಚರ್ಚೆ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: Demandಮೇಲೆ ಚರ್ಚೆ ಇರಬಹುದು, ಇವತ್ತು ಸರ್ಕಾರಕ್ಕೆ ಲಕ್ಷಾಂತರ ಕೋಟಿ ರೂ.ಗಳ, ಸಾವಿರಾರು ಕೋಟಿ ರೂ.ಗಳ ನಷ್ಟವಾಗುತ್ತಿದೆ. ಬೇಕಾದರೆ ದಾಖಲೆಗಳ ಸಮೇತ ಕೊಡುತ್ತೇನೆ. ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಚರ್ಚೆ ಮಾಡಿ ಆದರೆ ಇದು ನಿಯಮ 60 ರಲ್ಲಿ ಬರುವುದಿಲ್ಲವೆಂದು ನಾನು ಹೇಳಿದ್ದು.

ಶ್ರೀ ಹೆಚ್.ಡಿ.ರೇವಣ್ಣ: ನಿಯಮ 60 ರಲ್ಲಿ ಬೇಡವೆಂದರೆ ನಿಯಮ 69ಕ್ಕೆ convertಮಾಡಿ ನೀವು.

ಅಧ್ಯಕ್ಷರು: ನಿಯಮ 69 ಆದರೂ ಹೇಗೆ ಬರುತ್ತದೆ.? ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡುವಾಗ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ರಾಜ್ಯದಲ್ಲಿ ಇವತ್ತು ಇಂತಹ ಒಂದು ವಿದ್ಯುತ್ ಪರಿಸ್ಥಿತಿಯಿದೆ. ನಿರಂತರ ಜ್ಯೋತಿ 175 ತಾಲ್ಲೂಕುಗಳಲ್ಲಿ ಕೊಡುತ್ತೇವೆಂದು ಕಾರ್ಯಕ್ರಮ ರೂಪಿಸಿ, 2,800 ಕೋಟಿ ರೂ.ಗಳಿಗೆ ಖರೀದಿಸಿದ ಸಾಮಗ್ರಿಗಳು ಇವತ್ತು ರಸ್ತೆಯಲ್ಲಿ ಬಿದ್ದಿವೆ.ಇದನ್ನು ಹೇಳುವವರು, ಕೇಳುವವರು ಇಲ್ಲ ಇವತ್ತು. ಬೇಕಾದರೆ ದಾಖಲೆಗಳ ಸಮೇತ ನಿಮಗೆ ಕೊಡುತ್ತೇನೆ. ಒಂದು ದಿವಸಕ್ಕೆ 2,000 ಮೆಗಾವ್ಯಾಟ್ ವಿದ್ಯುತ್ ಲೆಕ್ಕ ಸಿಕ್ಕುತ್ತಿಲ್ಲವೆಂದು ಅವರೇ ಹೇಳಿಕೆ ಕೊಟ್ಟಿದ್ದಾರೆ. ಪತ್ರಿಕಾ ಹೇಳಿಕೆ ಕೊಟ್ಟಿರುವುದನ್ನು ಬೇಕಾದರೆ ತಮ್ಮ ಗಮನಕ್ಕೆ ತರುತ್ತೇನೆ. ಆದುದರಿಂದ ನಿಯಮ 60 ರಲ್ಲಿ ಬೇಡ ನಿಯಮ 69 ರಲ್ಲೇ ಕೊಡಿ. ಏಕೆಂದರೆ ಇದು ಗಂಭೀರವಾದ ವಿಷಯ. ಐದು ಕಂಪನಿಗಳು ಇವತ್ತು ಮುಳುಗುತ್ತಿವೆ. ಐದು ಕಂಪನಿಗಳಿಗೆ ಸುಮಾರು 4,000 ಕೋಟಿ ರೂ.ಗಳ ನಷ್ಟವಾಗಿದೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶಬೇಕು.

ಶ್ರೀ ವೆಂಕಟರಾವ್ ನಾಡಗೌಡ: ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಬಹಳ ಇದೆ. ಯಾವುದರಲ್ಲಾದರೂ ಸರಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಎಸ್.ಸುರೇಶ್ ಕುಮಾರ್: ಡಿಮ್ಯಾಂಡ್ಸ್ ಬಗ್ಗೆ ಚರ್ಚೆಯಾಗಬೇಕು.Finance Bill ಆಗಬೇಕು. ಅದು ಅದ ನಂತರ ನೀವು ಈ ವಿಷಯ ತೆಗೆದುಕೊಳ್ಳಿ. ಇದೇ ವಿಚಾರವನ್ನು ಡಿಮ್ಯಾಂಡ್ಸ್ ಬಗ್ಗೆ ಚರ್ಚೆ ಮಾಡಲಿ.

ಶ್ರೀ ಹೆಚ್.ಡಿ.ರೇವಣ್ಣ: ಇದರಲ್ಲಿ ಲೂಟಿ ನಡೆಯುತ್ತಿದೆ. ಇವತ್ತು ಬೇಡವೆಂದರೆ ಇನ್ನೊಂದು ದಿವಸ ಬೇಕಾದರೆ ಮಾತನಾಡುತ್ತೇನೆ.

ಅಧ್ಯಕ್ಷರು: ಡಿಮ್ಯಾಂಡ್ಸ್ ಮಾಡುವಾಗ ಚರ್ಚೆ ಮಾಡಿ. ಇದು ಹೇಗೆ ಬರುತ್ತದೆ. ಹೇಳಿ?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಇನ್ನೊಂದು ಬಾರಿ ಆಗುವುದಿಲ್ಲ. ಬೇಕಾದರೆ ನಿಮಗೆ convinceಮಾಡುತ್ತೇನೆ. ಅವಕಾಶ ಕೊಡಿ. ನಿಯಮ 69ಕ್ಕೆ convertಮಾಡಿ.

ಅಧ್ಯಕ್ಷರು: ಮಾನ್ಯ ಹೆಚ್.ಡಿ.ರೇವಣ್ಣನವರು ಮತ್ತು ಇತರರು ಗ್ರಾಮಾಂತರ ಪ್ರದೇಶಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡುವ ಉದ್ದೇಶದಿಂದ ನಿರಂತರ ಜ್ಯೋತಿಯನ್ನು ತರಬೇಕು ಎನ್ನುವುದನ್ನು ನಿಯಮ 60ರಲ್ಲಿ ಈಗಾಗಲೇ ತಂದಿರುತ್ತಾರೆ. ಇದು ಯಾವುದೇ ಸಾರ್ವಜನಿಕ ಮಹತ್ವ ಹಾಗೂ ಇತ್ತೀಚಿನ ಘಟನೆಯಾಗಿರುವುದಿಲ್ಲ. ಇದರಲ್ಲಿ ಈಗಾಗಲೇ ವಿದ್ಯುಚ್ಛಕ್ತಿ ಇಲಾಖೆ ಬೇಡಿಕೆಯಲ್ಲಿ ಇದನ್ನು ಬಹಳ ಸವಿಸ್ತಾರವಾಗಿ ಚರ್ಚೆಗೆ ಅವಕಾಶವಿರುವುದರಿಂದ ನಿಲುವಳಿ ಸೂಚನೆಯನ್ನು ತಿರಸ್ಕರಿಸಲಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನೀವು ಈ ತರಹ ಮಾಡಿದರೆ ನಾವು ಧರಣಿ ಕೊಡಬೇಕಾಗುತ್ತದೆ. ರಾಜ್ಯದಲ್ಲಿ ಇವತ್ತು ಎರಡು ಗಂಟೆಗಳ ಕಾಲ ವಿದ್ಯುತ್ ಕೊಡುವುದಕ್ಕಾಗುತ್ತಿಲ್ಲ.

ಅಧ್ಯಕ್ಷರು: ಪ್ರತಿಯೊಂದಕ್ಕೂ ಧರಣಿ ಇನ್ನೊಂದು ಎಂದು ಹೇಳಿದರೆ ಸದನ ನಡೆಸುವುದು ಹೇಗೆಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ದಯಮಾಡಿ ಈ ವಿಷಯದ ಗಂಭೀರತೆಯನ್ನು ನೀವು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು: ಗಂಭೀರತೆಯನ್ನು ಅರ್ಥ ಮಾಡಿಕೊಂಡು ಹೇಳಿದ್ದು, ಡಿಮ್ಯಾಂಡ್ಸ್ ಇದೆಯಲ್ಲ. ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಅರ್ಧಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅರ್ಧಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಹೇಗೆ ಆಗುತ್ತದೆ? ಡಿಮ್ಯಾಂಡ್ಸ್‌ನಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಸರ್ಕಾರದ ಖಜಾನೆಗೆ ನಷ್ಟವಾಗಿದೆ. ದಯಮಾಡಿ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಬೇಕಾದರೆ ಅವರು ಮಾತನಾಡಲಿ. ಅರ್ಧಗಂಟೆ ಬೇಕಾದರೆ ಬೇರೆ ರೂಪದಲ್ಲಿ ತನ್ನಿ.

ಶ್ರೀ ಹೆಚ್.ಡಿ.ರೇವಣ್ಣ: ಅರ್ದ ಗಂಟೆ ಚರ್ಚೆಗೆ ಅವಕಾಶ ಕೊಡಿ. ಮಾತನಾಡುವುದು ಏನಿಲ್ಲ. ಯಾವ ರೂಪದಲ್ಲಿ ತರೋಣ ಹೇಳಿ.

ಅಧ್ಯಕ್ಷರು: ಬೇರೆ ರೂಪದಲ್ಲಿ ತನ್ನಿ. ಅರ್ಧ ಗಂಟೆ ಚರ್ಚೆಗೆ ಅವಕಾಶ ಕೇಳಿ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಯಾವ ರೂಪದಲ್ಲಿ ಅವಕಾಶ ಕೊಡುತ್ತೀರೆಂದು ದಯಮಾಡಿ ಹೇಳಿ.

ಅಧ್ಯಕ್ಷರು: ಇವತ್ತೇ ಇಂಧನ ಇಲಾಖೆಯ ಚರ್ಚೆ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಇಂಧನ ಇಲಾಖೆಯಲ್ಲಿ ನಾವು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಗಂಭೀರತೆಯಿದೆ. ದಯಮಾಡಿ ಚರ್ಚೆಗೆ ಅವಕಾಶ ಕೊಡುವ ಹಾಗಿದ್ದರೆ ಕೊಡಿ ಇಲ್ಲವಾದರೆ ನಾವು ಧರಣಿ ಕೂರಬೇಕಾಗುತ್ತದೆ. ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಏಕೆ ಆಗುವುದಿಲ್ಲ? ಹಾಗೆ ಹೇಳಿದರೆ ಹೇಗೆ?

ಶ್ರೀಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ. ಸರ್ಕಾರದ ಖಜಾನೆಗೆ ನಷ್ಟವಾಗಿರುವುದನ್ನು ಸ್ಪಷ್ಟವಾಗಿ ತಿಳಿಸುತ್ತಿದ್ದೇವೆ. ಆದುದರಿಂದ ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು: ನಾನು ತೀರ್ಮಾನ ಕೊಟ್ಟಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅರ್ಧಗಂಟೆ ಅವಕಾಶ ಕೊಡಿ. ನಾವು ನಿಯಮ 60 ರಲ್ಲಿ ಕೇಳುತ್ತಿಲ್ಲ.

ಅಧ್ಯಕ್ಷರು: ಅರ್ಧಗಂಟೆ ಚರ್ಚೆಗೆ ಇನ್ನೊಂದು ಬಾರಿ ಕೊಡಿ. ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಇದನ್ನೇ convertಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು: ಅರ್ಧಗಂಟೆ ಎಲ್ಲಿದೆ? ನೀವು ನಿಯಮವನ್ನೂ ನೋಡುವುದಿಲ್ಲ. ಏನು ನೋಡುವುದಿಲ್ಲ. ಅರ್ಧಗಂಟೆ ಎಂದು ಹೇಗೆ ಕೊಡುವುದಕ್ಕೆ ಬರುತ್ತದೆ? ಎಲ್ಲಿದೆ rules?ನೀವು rulesನೋಡುವುದಿಲ್ಲ. ನಿಯಮ ಬಿಟ್ಟು ಮಾತನಾಡಬೇಕೆಂದರೆ ಕಷ್ಟ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ಅವರು ಕೊಟ್ಟ ನಿಲುವಳಿ ಸೂಚನೆಯನ್ನು ನೀವು ತಳ್ಳಿ ಹಾಕಿದ್ದೀರಿ, ಬೇರೆ ಯಾವುದಾದರೂ ಸ್ವರೂಪದಲ್ಲಿ ಬೇರೆ ruleನಲ್ಲಿ ತರಲಿ ಆವಾಗ ನೀವು ಪರಿಶೀಲಿಸಿ.

ಅಧ್ಯಕ್ಷರು: ಖಂಡಿತ, ಬೇರೆ ರೂಪದಲ್ಲಿ ತನ್ನಿ.

ಶ್ರೀಹೆಚ್.ಡಿ.ರೇವಣ್ಣ: ಇವತ್ತು ಐದು ಕಂಪನಿಗಳು ನಷ್ಟದಲ್ಲಿವೆ.

ಅಧ್ಯಕ್ಷರು: ನೀವು ಬೇರೆ ರೂಪದಲ್ಲಿ ತನ್ನಿ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಟಿ.ಬಿ.ಜಯಚಂದ್ರರವರು ಮಾತನಾಡಲಿ.

ಶ್ರೀ ಹೆಚ್.ಡಿ.ರೇವಣ್ಣ: ದಯಮಾಡಿ ಯಾವ ರೂಪದಲ್ಲಿ ತರಬೇಕೆಂದು ಹೇಳಿ. ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಿ. ಇಲ್ಲವಾದರೆ ಧರಣಿ ಕೂರಬೇಕಾಗುತ್ತದೆ.

ಅಧ್ಯಕ್ಷರು: ಬೇಡ, Pleaseಮತ್ತೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಇವತ್ತೇ ಕೊಡಿ.

ಅಧ್ಯಕ್ಷರು: ಅರ್ಧಗಂಟೆ ಕೊಡುವುದಕ್ಕೆ ನಿಯಮವೆಲ್ಲಿದೆ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾವು ಏನು ಹೇಳಬೇಕು.

(ಗೊಂದಲ)

ಅಧ್ಯಕ್ಷರು: ಸಧ್ಯಕ್ಕೆ ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಈಗ ಚರ್ಚೆಗೆ ಅವಕಾಶ ಕೊಡುತ್ತಿರೋ, ಅಥವಾ ಧರಣಿ ಕೂರಬೇಕೋ ದಯಮಾಡಿ ಹೇಳಿ?

ಅಧ್ಯಕ್ಷರು: ಈ ರೀತಿ ಮಾಡಿದರೆ ಸದನ ನಡೆಸುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ಇದೆ.

ಅಧ್ಯಕ್ಷರು: ಇಲ್ಲಿ ಚರ್ಚೆ ಮಾಡುವ ಪ್ರತಿಯೊಂದು ವಿಚಾರವೂ ಗಂಭೀರತೆಯಿಂದ ಕೂಡಿರುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ: ಯಾವ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡುತ್ತೀರೆಂದು ಹೇಳಿ, ನಿಯಮ 60 ಅಥವಾ 69 ರಲ್ಲಿ ಕೊಡುತ್ತಿರೋ? ಇದು ಗಂಭೀರತೆಯಿರುವುದರಿಂದ ಕೇಳುತ್ತಿದ್ದೇವೆ.

ಅಧ್ಯಕ್ಷರು: ಬೇರೆ ರೂಪದಲ್ಲಿ ತನ್ನಿ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಯಾವ ರೂಪದಲ್ಲಿ ತರಬೇಕೆಂದು ಹೇಳಿ. ಅರ್ಧಗಂಟೆ ಚರ್ಚೆಗೆ ನೀವೇ ನಿಗದಿಪಡಿಸಿ. ಇವತ್ತು ಐದು ಕಂಪನಿಗಳು ಮುಳುಗಿ ಹೋಗುತ್ತಿವೆ. ಇವತ್ತು ಎರಡು ಗಂಟೆಗಳ ಕಾಲ ಕರೆಂಟ್ ಸಿಗುತ್ತಿಲ್ಲ. ಒಂದು ಟಿ.ಸಿ.ಕೆಳಿದರೆ ಮೂರು ತಿಂಗಳು ನಾಲ್ಕು ತಿಂಗಳುಗಳಾದರೂ ಟಿ.ಸಿ. ಸಿಗುತ್ತಿಲ್ಲ. ಈ ಸರ್ಕಾರ ಲೂಟಿ ಮಾಡುತ್ತಿರುವುದನ್ನು ನಾವು ಹೇಳಿದರೆ ಬೇಡವೆಂದರೆ, ಬಿಟ್ಟು ಬಿಡಿ ಇಲ್ಲವಾದರೆ.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ ಅವರು ಚರ್ಚೆಯನ್ನು ಪ್ರಾರಂಭ ಮಾಡಲಿ.

ಶ್ರೀ ಹೆಚ್.ಡಿ.ರೇವಣ್ಣ: ದಯವಿಟ್ಟು ನೀವು ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಿ ಇಲ್ಲವಾದರೆ ಧರಣಿ ಕೂರಬೇಕಾಗುತ್ತದೆ.

ಅಧ್ಯಕ್ಷರು: ನಿಯಮದಲ್ಲಿ ಅವಕಾಶ ಎಲ್ಲಿದೆ?

ಶ್ರೀ ಹೆಚ್.ಡಿ.ರೇವಣ್ಣ: ಆನಂತರ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ನಿಯಮದಲ್ಲಿ ಇಲ್ಲದಿರುವುದನ್ನು ಕೊಡಿ ಎಂದರೆ ಆಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ಬರಗಾಲದ ಚರ್ಚೆಯಾದ ನಂತರ ಅರ್ಧಗಂಟೆ ಅವಕಾಶ ಕೊಡಿ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿರಾ?

ಅಧ್ಯಕ್ಷರು: ಮಾತನಾಡಿ. ನೀವು ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ ಅವಕಾಶ ಕೊಡುತ್ತೇನೆ.

ಶ್ರೀ ಯು.ಟಿ.ಖಾದರ್: ಮಾನ್ಯ ಅಧ್ಯಕ್ಷರೆ, ರಾಷ್ಟ್ರ ಪತಿಯಾಗಿ ನೂತನವಾಗಿ ಮಾನ್ಯ ಪ್ರಣಬ್ ಮುಖರ್ಜಿಯವರು ಆಯ್ಕೆಯಾಗಿದ್ದಾರೆ. ಅವರನ್ನು ಅಭಿನಂದಿಸುವುದು ನಮ್ಮ ಕರ್ತವ್ಯವಾಗಿದ್ದು, ಅವರನ್ನು ಅಭಿನಂದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಮಾಣ ವಚನ ಸ್ವೀಕರಿಸಿದ ನಂತರ ಅಭಿನಂದನೆ ಮಾಡುವುದು ಸೂಕ್ತ.

ಶ್ರೀ ಸಿದ್ದರಾಮಯ್ಯ: ಫಲಿತಾಂಶ ಬಂದಿರುವ ಕಾರಣ ಈಗಲೇ ಅಭಿನಂದನೆ ಮಾಡೋಣ. ಪ್ರಮಾಣವಚನವನ್ನು ಅವರು 25ನೇ ತಾರೀಖಿಗೆ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು: ಅಂದೇ ಅಭಿನಂದನೆ ಮಾಡೋಣ.